# ಒಡಲ ತಳಮಳ ಶುದ್ಧಿ ಆಗಿದ್ದು




‘ಶುದ್ಧಿ’ ಸಿನಿಮಾದಲ್ಲಿ ನಿವೇದಿತಾ



ಆದರ್ಶ್ ಈಶ್ವರಪ್ಪ

**2017**ರ ಮಾರ್ಚ್‌ನಲ್ಲಿ ಬಿಡುಗಡೆಯಾದ ‘ಶುದ್ಧಿ’, ಹಲವು ಕಾರಣಗಳಿಗೆ ಗಮನಸೆಳೆದ ಸಿನಿಮಾ. ದೆಹಲಿಯಲ್ಲಿ ನಡೆದ ‘ನಿರ್ಭಯಾ’ ಅತ್ಯಾಚಾರ ಪ್ರಕರಣ, ಬೆಂಗಳೂರಿನಲ್ಲಿಯೇ ಹಣ ತೆಗೆಯಲು ಎಟಿಎಂ ಹೊಕ್ಕ ಮಹಿಳೆಯ ತಲೆಯನ್ನು ಒಡೆದು ಹಣ ದೋಚಿದ ಕೃತ್ಯ, ಮಂಗಳೂರಿನ ಪಬ್‌ಗೆ ಶ್ರೀರಾಮ ಸೇನೆಯ ಪುಂಡರು ನುಗ್ಗಿ ಅಲ್ಲಿನ ಹೆಣ್ಣುಮಕ್ಕಳ ಕೂದಲು ಹಿಡಿದು ಎಳೆದಾಡಿದ ಘಟನೆ – ಹೀಗೆ ಹೆಣ್ಣುಮಕ್ಕಳ ಮೇಲೆ ಎಗ್ಗಿಲ್ಲದೆ ನಡೆಯುತ್ತಿದ್ದ ಹಲವುರೂಪದ ದೌರ್ಜನ್ಯಗಳಿಗೆಲ್ಲ ನೀಡಿದ ಸ್ಪಂದನೆಯ ರೂಪದಲ್ಲಿ ‘ಶುದ್ಧಿ’ ರೂಪುಗೊಂಡಿದೆ.

ಸಮಕಾಲೀನ ವಿದ್ಯಮಾನಗಳಿಗೆ ಇಷ್ಟು ಸಮರ್ಥವಾಗಿ ಮತ್ತು ತೀವ್ರವಾಗಿ ಸಿನಿಮಾ ಮೂಲಕ ಸ್ಪಂದಿಸಿದ ಉದಾಹರಣೆಗಳು ಕನ್ನಡದಲ್ಲಿ ಕಮ್ಮಿ. ಈಗ ನಿರ್ಭಯಾ ಅತ್ಯಾಚಾರ ಪ್ರಕರಣ ನಡೆದು ಏಳು ವರ್ಷಗಳು ಕಳೆದಿವೆ. ‘ಶುದ್ಧಿ’ ಸಿನಿಮಾ ಬಿಡುಗಡೆಯಾಗಿ ಎರಡು ವರ್ಷಗಳಾಗಿವೆ. ಸಮಾಜ ಬದಲಾಗಿದೆಯಾ? ಅತ್ಯಾಚಾರ ಮಾಡುವ ಮನಸ್ಥಿತಿಗಳು ಕಡಿಮೆಯಾಗಿವೆಯಾ? ಈ ಪ್ರಶ್ನೆಗೆ ಉತ್ತರದ ಜಾಗದಲ್ಲಿ ಹೈದರಾಬಾದ್‌ನ ಡಾ. ಪ್ರಿಯಾಂಕಾ ರೆಡ್ಡಿ ಅತ್ಯಾಚಾರ ಪ್ರಕರಣ ನಮ್ಮ ಆತ್ಮಸಾಕ್ಷಿಯನ್ನು ಅಣಕಿಸುತ್ತ ಕೂತಿದೆ. ಹಾಗಾದರೆ ನಮ್ಮ ಪ್ರತಿಭಟನೆಗಳು, ‘ಶುದ್ಧಿ’ಯಂಥ ಸಿನಿಮಾಗಳು ಸಮಾಜದ ಮೇಲೆ ಪರಿಣಾಮ ಬೀರಲು ಯಶಸ್ವಿಯಾಗಿವೆಯೇ? ಸಿನಿಮಾಗಳು ಸಮಾಜದ ಪರಿವರ್ತನೆಗೆ ಕಾರಣವಾಗುತ್ತದೆ ಎಂಬ ಗಟ್ಟಿಯಾದ ನಂಬಿಕೆ ಸ್ವತಃ ‘ಶುದ್ಧಿ’ ಸಿನಿಮಾ ನಿರ್ದೇಶಿಸಿದ ಆದರ್ಶ್ ಈಶ್ವರಪ್ಪ ಅವರಿಗೂ ಉಳಿದಿಲ್ಲ. ಸಮಾಜವನ್ನು ಬದಲಾಯಿಸಬೇಕು ಎಂಬ ಉದ್ದೇಶ ಇಟ್ಟುಕೊಂಡು ಮಾಡಿದ ಸಿನಿಮಾ ಕೂಡ ಅದಲ್ಲ ಎನ್ನುತ್ತಾರೆ ಅವರು.

‘ನಿರ್ಭಯಾ ಅತ್ಯಾಚಾರದ ನಂತರ ದೆಹಲಿಯಲ್ಲಿ ಜನರ ಪ್ರತಿಭಟನೆಯ ವಿಡಿಯೊ ಒಂದನ್ನು ನೋಡಿದೆ. ಆಕ್ರೋಶಿತರಾಗಿದ್ದ ಜನರ ಪ್ರತಿಭಟನೆಯನ್ನು ನೋಡಿ ಮುಗಿಸುವಷ್ಟರಲ್ಲಿ ನನ್ನ ಕಣ್ಣುಗಳಲ್ಲಿ ನೀರಿತ್ತು. ಆ ಭಾವುಕತೆಯೇ ನನ್ನನ್ನು ‘ಶುದ್ಧಿ’ ಸಿನಿಮಾ ಮಾಡುವಂತೆ ಪ್ರೇರೇಪಿಸಿತು. ‘ಶುದ್ಧಿ’ ಸಿನಿಮಾ, ನನ್ನ ಸುತ್ತಲಿನ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ನನ್ನ ಪ್ರತಿಭಟನೆ. ಆ ಸಮಯದಲ್ಲಿ ಜನರಿಗೆ ಏನೋ ಸಂದೇಶ ಕೊಡಬೇಕು ಎಂಬ ಉದ್ದೇಶವೂ ನನಗಿರಲಿಲ್ಲ. ನನ್ನೊಳಗಿನ ಫ್ರಸ್ಟ್ರೇಷನ್ ಅನ್ನು ಫೇಸ್‌ಬುಕ್‌ನಲ್ಲಿ ಬರೆದುಕೊಳ್ಳಲಿಲ್ಲ; ಬದಲಿಗೆ ಸ್ಕ್ರಿಪ್ಟ್ ಬರೆದೆ. ಸಿನಿಮಾ ಮಾಡಿದೆ’ ಎಂಬುದು ಆದರ್ಶ್ ವಿವರಣೆ. ಅವರ ಮಾತಿನಲ್ಲಿ, ಅತ್ಯಾಚಾರದಂಥ ಘಟನೆಗಳು ಮತ್ತೆ ಮತ್ತೆ ಮರುಕಳಿಸುತ್ತಲೇ ಇರುವ ಕುರಿತು ವಿಷಾದವೂ ಎದ್ದು ಕಾಣುತ್ತಿತ್ತು.

ಸಮಕಾಲೀನ ವಿಷಯಗಳನ್ನು ಇಟ್ಟುಕೊಂಡು ಸಿನಿಮಾ ಮಾಡುವುದೆಂದರೆ ಕೆಂಡವನ್ನು ಒಡಲೊಳಗೆ ಸುತ್ತಿಕೊಂಡಂತೆ. ವಿವಾದದ ಬೆಂಕಿ ಯಾವಾಗ ಹೊತ್ತಿಕೊಳ್ಳುತ್ತದೆಯೋ ಹೇಳಲಾಗದು. ಇಂಥ ಕೃತ್ಯಗಳನ್ನು ರಾಜಕೀಯ ದಾಳಗಳಾಗಿ ಬಳಸಿಕೊಳ್ಳುವುದೇನೂ ನಮ್ಮ ರಾಜಕಾರಣಿಗಳಿಗೆ ಹೊಸದಲ್ಲ. ‘ಶುದ್ಧಿ’ ಸ್ಕ್ರಿಪ್ಟ್ ಬರೆಯುವಾಗ ಆದರ್ಶ್ ಅವರಿಗೆ ಇವೆಲ್ಲ ಮನಸ್ಸಿಗೇ ಬಂದಿರಲಿಲ್ಲವಂತೆ. ‘ಈ ಸಿನಿಮಾ ಮಾಡುವಾಗ ನಾನು ತುಂಬ ಮುಗ್ಧನಾಗಿದ್ದೆ. ಮನಸಿಗೆ ಅನಿಸಿದ್ದನ್ನು ಬರೆಯುತ್ತಾ ಹೋದೆ. ನಾಲ್ಕೈದು ಜನ ಸ್ಕ್ರಿಪ್ಟ್ ಓದಿದ ಮೇಲೆ, ‘ಸ್ಕ್ರಿಪ್ಟ್ ಚೆನ್ನಾಗಿದೆ. ಆದರೆ ಕಾಂಟ್ರವರ್ಸಿ ಆಗುವ ಸಾಧ್ಯತೆ ಇದೆ’ ಎಂದರು. ಏನಾಗುತ್ತದೆ ನೋಡೋಣ ಎಂದು ಸಿನಿಮಾ ಮಾಡಿದೆ. ನನ್ನ ಅದೃಷ್ಟಕ್ಕೆ ಸೆನ್ಸಾರ್ ಮಂಡಳಿಯವರೂ ಚಿತ್ರವನ್ನು ಮೆಚ್ಚಿಕೊಂಡರು’ ಎಂದು ನೆನಪಿಸಿಕೊಳ್ಳುತ್ತಾರೆ.

ಸಿನಿಮಾದಿಂದ ಸಮಾಜವನ್ನು ರಾತ್ರೋರಾತ್ರಿ ಬದಲಾಯಿಸಲು ಸಾಧ್ಯವಿಲ್ಲ ಎಂಬುದು ಎಷ್ಟು ವಾಸ್ತವವೋ, ಸಿನಿಮಾ ತನ್ನದೇ ರೀತಿಯಲ್ಲಿ ಸಹೃದಯರ ಮೇಲೆ ಪರಿಣಾಮ ಬೀರುತ್ತದೆ ಎನ್ನುವುದೂ ಅಷ್ಟೇ ಸತ್ಯ ಎನ್ನುವುದು ಆದರ್ಶ್ ಅನುಭವಕ್ಕೆ ತಂದುಕೊಟ್ಟಿದ್ದೂ ಇದೇ ‘ಶುದ್ಧಿ’.

‘ನಾನು ನಿರೀಕ್ಷಿಸಿರದ ಮಟ್ಟದಲ್ಲಿ ಸಿನಿಮಾ ಪ್ರೇಕ್ಷಕರಿಗೆ ತಲುಪಿತು. ವಿಶೇಷವಾಗಿ ಹೆಣ್ಣುಮಕ್ಕಳಂತೂ ಸಿನಿಮಾದ ಕೆಲವು ದೃಶ್ಯಗಳನ್ನು ನೋಡುವಾಗ ಕಣ್ಣೀರು ಹಾಕುತ್ತಿದ್ದರು. ‘ನಾನೂ ಹಲವು ಸಲ ದೌರ್ಜನ್ಯ ಅನುಭವಿಸಿದ್ದೀನಿ. ಈ ಚಿತ್ರ ನೋಡಿ ನನಗೊಂದು ಧೈರ್ಯ ಬಂದಿದೆ’ ಎಂದು ಹೇಳಿದವರೂ ಇದ್ದಾರೆ. ಕೆಲವು ದೃಶ್ಯಗಳಂತೂ ಅವರಿಗೆ ಎಷ್ಟು ಕಾಡುವ ಹಾಗಿತ್ತು ಎಂದರೆ ಅಳುತ್ತಾ ಎದ್ದು ಹೋಗಿದ್ದೂ ಇದೆ. ನನ್ನೊಳಗಿನ ಪ್ರತಿಭಟನೆಯನ್ನು ಹೊರಹಾಕಲಿಕ್ಕಾಗಿ ಮಾಡಿದ ಸಿನಿಮಾ ಇಷ್ಟು ಆಳವಾಗಿ ಸಮಾಜಕ್ಕೆ ತಲುಪುತ್ತದೆ ಎಂದು ಖಂಡಿತ ಅಂದುಕೊಂಡಿರಲಿಲ್ಲ’ ಎಂದು ಹೇಳುತ್ತಾರೆ ಅವರು.

ಇಂಥ ಪ್ರಯತ್ನಗಳು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ನಡೆಯತೊಡಗಿದರೆ ಅದರಿಂದ ಉಂಟಾಗುವ ಪರಿಣಾಮವೂ ಹೆಚ್ಚಬಹುದು ಎಂಬುದು ಅವರ ಆಶಾವಾದ. ‘ಸಿನಿಮಾದಿಂದ ಜನರನ್ನು ಬದಲಾಯಿಸುತ್ತೇವೆ ಎನ್ನುವುದು ಸುಲಭದ ಮಾತಲ್ಲ. ವರ್ಷಕ್ಕೆ ಹದಿನೈದು ಇಪ್ಪತ್ತು ‘ಶುದ್ಧಿ’ ಥರದ ಸಿನಿಮಾಗಳು ಬಂದರೆ ಎಲ್ಲೋ ಸ್ವಲ್ಪ ಜನರ ಮನಸ್ಥಿತಿ ಬದಲಾಗಬಹುದೇನೋ’ ಎಂಬ ಆದರ್ಶ್ ಆಶಯ ಸಿನಿಮಾ ಜಗತ್ತಿನಲ್ಲಿಯೂ, ಸಮಾಜದಲ್ಲಿಯೂ ಸದ್ಯದ ಮಟ್ಟಿಗಂತೂ ಕೈಗೆಟುಕದ ಕನಸಾಗಿಯೇ ಕಾಣುತ್ತದೆ. ■

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in